ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಪೌಷ್ಟಿಕ ಆಹಾರವನ್ನು ತಯಾರಿಸಲು ಮೈಸೂರು, ಬೆಳಗಾಂ, ಚಿತ್ರದುರ್ಗ ಮತ್ತು ರಾಯಚೂರು ಜಿಲ್ಲೆಯಲ್ಲಿರುವ ಕೆಲವು ಸೇವಾ ಸಂಸ್ಥೆಗಳಿಗೆ ಅನುಮತಿ ಕೊಟ್ಟಿದ್ದೀರೋ ಅಥವಾ ಖಾಸಗಿಯವರಿಗೆ ಕೊಟ್ಟಿದ್ದೀರೋ? ಇದನ್ನು ತಯಾರಿಸಲು ಯಾವ ನಿಯಮಗಳನ್ನು ಹಾಗೂ ಅರ್ಹತೆಗಳನ್ನು ಇಟ್ಟಿದ್ದೀರಿ?

ಶ್ರೀ ಡಿ. ಮಂಜುನಾಥ್.—ಈಗ ಸರ್ಕಾರಿ ಸ್ವಾಮ್ಯದ ರಾಜ್ಯ ಅಗ್ರೋ ಇಂಡಸ್ಟ್ರೀಸ್ ಪ್ರಾಡಕ್ಟ್ಸ್, ಇವರಿಗೆ ಲಾಭ ನಷ್ಟಗಳ ಆಧಾರವಿಲ್ಲದೆ ವಿತರಣೆ ಜವಾಬ್ದಾರಿಯನ್ನು ನೀಡಿದೆಯೇ ಹೊರತು ಪ್ರೈವೇಟ್ ಏಜೆನ್ಸಿಗಳಿಗೆ ಇದರ ಜವಾಬ್ದಾರಿಯನ್ನು ನೀಡಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈಗ ನೀವು ಮಕ್ಕಳಿಗೆ ವಿತರಣೆ ಮಾಡುತ್ತಿರುವ ಪೌಷ್ಟಿಕ ಆಹಾರ ಕವಿಬೆರಕೆ ಆಗುತ್ತಿದೆ ಎಂದು ಕಳೆದ ಐದಾರು ತಿಂಗಳುಗಳಿಂದ ಕೇಳಿಬರುತ್ತಿದೆ. ಆದ್ದರಿಂದ ಈಗ ವಿತರಣೆ ಮಾಡುತ್ತಿರುವ ಆಹಾರವನ್ನು ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯಿಂದ ಪರೀಕ್ಷೆ ಮಾಡಿಸಿ ಅವರಿಂದ ಒಂದು ನಿಖರವಾದಂಥ ವರದಿಯನ್ನು ಏನಾದರೂ ತರಿಸಿ ಕೊಂಡಿದ್ದೀರಾ?

ಶ್ರೀ ಡಿ. ಮಂಜುನಾಥ್.—ಇಲ್ಲ, ಏಕೆಂದರೆ, ಅಂತಹ ನಿರ್ದಿಷ್ಟವಾದಂಥ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿಲ್ಲ. ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯವರು ಇದನ್ನು ಪರೀಕ್ಷೆ ಮಾಡಿದ ಮೇಲೆಯೇ ವಿತರಣೆ ಮಾಡುತ್ತಿರುವುದು. ಇದು ಎಲ್ಲಿಯಾದರೂ ಕಲಬೆರಕೆಯಾಗಿರುವುದು ತಮ್ಮ ಗಮನಕ್ಕೆ ಬಂದಿದ್ದರೆ, ಅದನ್ನು ನನಗೆ ಬರೆದು ತಿಳಿಸಿ. ನಾನು ವಿಚಾರಣೆ ಮಾಡಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಪೌಷ್ಟಿಕ ಆಹಾರ ಮಕ್ಕಳಿಗೆ ವಿತರಣೆ ಆಗದೆ ಹೊರಗಡೆ ಮಾರಾಟವಾಗುತ್ತಿದೆ ಎಂಬುದು ತಮ್ಮ ಗಮನಕ್ಕೆ ಏನಾದರೂ ಬಂದಿದೆಯೇ ? ಬಂದಿದ್ದರೆ ತಾವು ಏನು ಕ್ರಮ ಕೈಕೊಂಡಿದ್ದೀರಿ?

ಶ್ರೀ ಡಿ. ಮಂಜುನಾಥ್.—ಹೊರಗಡೆ ಮಾರಾಟವಾದಂಥ ಪ್ರಸಂಗ ನನ್ನ ಗಮನಕ್ಕೆ ಬಂದಿಲ್ಲ. ಅಂತಹ ನಿರ್ದಿಷ್ಟವಾದಂಥ ಪ್ರಕರಣ ಮಾನ್ಯ ಸದಸ್ಯರ ಗಮನಕ್ಕೆ ಬಂದಿದ್ದರೆ, ಅದನ್ನು ನನಗೆ ಬರೆದು ತಿಳಿಸಿದರೆ, ನಾನು ಮುಂದಿನ ಕ್ರಮ ಕೈಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಶಾಲಾ ಮಕ್ಕಳಿಗೆ ವಿತರಣೆ ಮಾಡಲು ಈ ಪೌಷ್ಟಿಕ ಆಹಾರವನ್ನು ಖಾಸಗಿಯವರ ಮೂಲಕ ತಾಲ್ಲೂಕ್ ಕೇಂದ್ರಗಳಿಗೆ ಸಾಗಿಸುವ ವ್ಯವಸ್ಥೆ ಏನಿದೆ ಅದು ಸರಿಯಾಗಿ ನಡೆಯುತ್ತಿಲ್ಲ. ಕೆಲವು ತಾಲ್ಲೂಕ್‌ಗಳಿಗೆ ಈ ಆಹಾರ ಸರಿಯಾಗಿ ಬರುತ್ತಿಲ್ಲ. ಇದರ ಜೊತೆಗೆ, ಇಲ್ಲಿ ಜೀವಸತ್ವ ಇರುವಂತಹ ಆಹಾರವನ್ನೇ ಸರಬರಾಜು ಮಾಡಲಾಗುತ್ತಿದೆ ಎಂದು ಇಲ್ಲಿ ಏನು ಹೇಳಿದ್ದೀರಿ, ಇದು ಸರಿಯಲ್ಲ. ಜೀವಸತ್ವ ಇಲ್ಲದ ಆಹಾರವನ್ನು ಸರಬರಾಜು ಮಾಡುತ್ತಿರುವ ಕಾರಣ, ಇದನ್ನು ಮಕ್ಕಳು ಸೇವನೆ ಮಾಡುತ್ತಿಲ್ಲ. ಕಳೆದ ಐದಾರು ತಿಂಗಳುಗಳಿಂದ ಈ ಆಹಾರವನ್ನು ಪರೀಕ್ಷೆ ಮಾಡಿದ್ದರೆ, ಈಗಲಾದರೂ ಒಂದೆರಡು ಕೇಂದ್ರಗಳಿಂದ ಈ ಆಹಾರವನ್ನು ತರಿಸಿಕೊಂಡು ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯಲ್ಲಿ ಪರೀಕ್ಷೆ ಮಾಡಿಸುತ್ತೀರಾ?

ಶ್ರೀ ಡಿ. ಮಂಜುನಾಥ್.—ಮಾನ್ಯ ಸದಸ್ಯರು ಟ್ರಾನ್ಸ್‌ಪೋರ್ಟ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಆ ಬಗ್ಗೆ ಹೇಳುವುದಾದರೆ ಟೆಂಡರ್ ಕರೆಯುತ್ತೇವೆ. ಯಾರು ಲೋಯರ್ಸ್ಟ್ ಟೆಂಡರ್ ಕಳುಹಿಸಿಕೊಟ್ಟಿರುತ್ತಾರೋ ಅಂತಹ ಟೆಂಡರ್ ಅನ್ನು ಆಕ್ಸೆಪ್ಟ್ ಮಾಡಿಕೊಳ್ಳುತ್ತೇವೆ. ಈಗ ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೋ ಆ ಸಲಹೆಯನ್ನು ಇನ್ನು ಮುಂದೆ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

ಬ್ಯಾಡಗಿ ತಾಲ್ಲೂಕಿನಲ್ಲಿರುವ ಶಾಲಾ ಕಟ್ಟಡಗಳು

೧೭೭. ಶ್ರೀ ಕೆ. ಎಸ್. ಬೀಳಗಿ.—(ಬ್ಯಾಡಗಿ)[ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆ ಬ್ಯಾಡಗಿ ತಾಲ್ಲೂಕಿನಲ್ಲಿರುವ ಸ್ವಂತ ಕಟ್ಟಡಗಳಲ್ಲಿರುವ ಸರ್ಕಾರಿ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು?

ಅ) ಮಂಜೂರಾದ ಶಿಕ್ಷಕರ ಸಂಖ್ಯೆಗಿಂತ ಕಡಿಮೆ ಶಿಕ್ಷಕರಿರುವ ಶಾಲೆಗಳೆಷ್ಟು ? (ಗ್ರಾಮಗಳ ಹೆಸರುಗಳನ್ನು ಕೊಡುವುದು?

ಇ) ಕಡಿಮೆ ಇರುವ ಸ್ಥಳಗಳಿಗೆ ಶಿಕ್ಷಕರನ್ನು ಕೂಡಲೇ ನೇಮಕ ಮಾಡಲಾಗುವುದೇ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು)

ಅ) ೩೫ (ಹಿರಿಯ ಪ್ರಾಥಮಿಕ ಶಾಲೆಗಳು).

೩೯. (ಕಿರಿಯ ಪ್ರಾಥಮಿಕ ಶಾಲೆಗಳು).

ಆ) ೧೪.

ಕಡಿಮೆ ಶಿಕ್ಷಕರಿರುವ ಗ್ರಾಮಗಳ ಶಾಲೆಗಳ ಪಟ್ಟಿ

೧) ಕಿರಿಯ ಪ್ರಾಥಮಿಕ ಶಾಲೆ, ಬಡಮಲ್ಲಿ.

೨) ಹಿರಿಯ ಪ್ರಾಥಮಿಕ ಶಾಲೆ, ಕುರ್ದಕೋಡಿಹಳ್ಳಿ.

೩) ಹಿರಿಯ ಪ್ರಾಥಮಿಕ ಶಾಲೆ, ಮುತ್ತೂರು.

೪) ಹಿರಿಯ ಪ್ರಾಥಮಿಕ ಶಾಲೆ, ತೆರವಾಡಿ.

೫) ಹಿರಿಯ ಪ್ರಾಥಮಿಕ ಶಾಲೆ, ಚಿನ್ನಿರಟ್ಟಿ.

೬) ಮಾದರಿ ಪ್ರಾಥಮಿಕ ಶಾಲೆ, ಸೂಡಂಬ.

೭) ಕನ್ನಡ ಹೆಣ್ಣು ಮಕ್ಕಳ ಶಾಲೆ. ಮಲ್ಲೂರ.

೮) ಕನ್ನಡ ಗಂಡು ಮಕ್ಕಳ ಶಾಲೆ, ಹಿಡಿಗೊಂಡ (ಪಿ. ೧೦,

೯) ಹಿರಿಯ ಪ್ರಾಥಮಿಕ ಶಾಲೆ. ಬಿಕ್ಕಳ್ಳಿ.

೧೦) ಕಿರಿಯ ಪ್ರಾಥಮಿಕ ಶಾಲೆ, ಚಿಕ್ಕಬಾಸೂರ,

೧೧) ಕನ್ನಡ ಗಂಡುಮಕ್ಕಳ ಶಾಲೆ, ಹಳೆಗುಂಗರ ತೊಪ್ಪ.

೧೨) ಮಾದರಿ ಪ್ರಾಥಮಿಕ ಶಾಲೆ ಬ್ಯಾಡಗಿ (ಪಿ. ೧೧).

೧೩) ಮಾದರಿ ಪ್ರಾಥಮಿಕ ಶಾಲೆ. ಮೊಟೆಬೆನ್ನೂರು (ಪಿ. ೧೨.)

೧೪) ಉರ್ದು ಗಂಡುಮಕ್ಕಳ ಶಾಲೆ, ಚಿಕ್ಕಬಾಸೂರ.

೫) ಈ ಹುದ್ದೆಗಳನ್ನು ಜಿಲ್ಲಾ ಆಯ್ಕೆ ಸಮಿತಿಯಿಂದ ತುಂಬಲು ಸರ್ಕಾರ ಕ್ರಮ ಕೈಗೊಳ್ಳಲಿದೆ.

ಶ್ರೀ ಕೆ. ಎಸ್. ಬೀಳಗಿ —ಮಾನ್ಯ ಅಧ್ಯಕ್ಷರೇ ಬ್ಯಾಡಗಿ ತಾಲ್ಲೂಕಿನಲ್ಲಿ ಸ್ವಂತ ಕಟ್ಟಡಗಳಿರುವ ಎಷ್ಟು ಹಿರಿಯ ಹಾಗೂ ಕಿರಿಯ ಪ್ರಾಥಮಿಕ ಶಾಲೆಗಳು ಇವೆ?

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಕೆ. ಎಸ್. ಬೀಳಗಿ —ರಾಜ್ಯದಲ್ಲಿ ಎಷ್ಟು ಶಾಲೆಗಳಿಗೆ ಕಟ್ಟಡಗಳು ಇವೆ?

ಶ್ರೀ ಡಿ. ಮಂಜುನಾಥ್.—ಮಾನ್ಯ ಸದಸ್ಯರು ಬೇರೆ ಪ್ರಶ್ನೆಯೆಂನ್ನು ಕಳುಹಿಸಿ ಕೊಟ್ಟರೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಗುಲ್ಬರ್ಗ ತಾಲ್ಲೂಕಿನಲ್ಲಿರುವ ಫರ್ತಾಬಾದ್ ಕಿರಿಯ ಕಾಲೇಜು ಹಾಗೂ ಪ್ರೌಢಶಾಲಾ ಕಟ್ಟಡಗಳು

೧೯೮. ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್) —ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸರ್ಕಾರಿ ಕಿರಿಯ ಕಾಲೇಜು ಮತ್ತು ಪ್ರೌಢಶಾಲೆಗಳು ಎಷ್ಟು. (ಜಿಲ್ಲಾವಾರು ವಿವರ).